ಅರಣ್ಯಾಧಿಕಾರಿಗಳ ಮೇಲೆ ನಡೆದಿರುವ ದಾಳಿಗಳು

2131 (3169); ಶ್ರೀ ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಕಳೆದ ಒಂದು ವರ್ಷದ ಅವಧಿಯಲ್ಲಿ ಅರಣ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಷ್ಟು ಜನ ಅಧಿಕಾರಿಗಳು ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ: ಇದೇ ಅವಧಿಯಲ್ಲಿ ಲೈಂಗಿಕ ಕಿರುಕುಳಕ್ಕೆ ಸಂಬಂಧಪಟ್ಟಂತೆ ಎಷ್ಟು ಜನ ಅಧಿಕಾರಿಗಳು ಮೇಲೆ ದೂರು ದಾಖಲಿಸಲಾಗಿದೆ; (ಇವರ ಹೆಸರು ಪದನಾಮ ಮತ್ತು ಪ್ರಕರಣದ ವಿವರಗಳು, ಇವರು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ಸಂಪೂರ್ಣ ವಿವರಗಳನ್ನು ಒದಗಿಸುವುದು)

ಆ) ಲೋಕಾಯುಕ್ತ ದಾಳಿ ನಡೆದ ನಂತರ ಹಾಗೂ ಲೈಂಗಿಕ ಕಿರುಕುಳದ ದೂರು ಬಂದ ನಂತರವೂ ಇವರ ಪೈಕಿ ಇಷ್ಟು ಜನ ಅಧಿಕಾರಿಗಳ ಮೇಲೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಾಗಿದೆ. ಎಷ್ಟು ಜನರನ್ನು ಅಮಾನತ್ತಿನಲ್ಲಿ ಇಡಲಾಗಿದೆ: ಎಷ್ಟು ಜನರನ್ನು ವರ್ಗಾವಣೆ ಮಾಡಲಾಗಿದೆ; (ಇಂತಹ ಅಧಿಕಾರಿಗಳ ಹೆಸರು ಪದನಾಮದ ವಿವರಗಳನ್ನು ಒದಗಿಸುವುದು)

ಇ) ಒಂದು ವೇಳೆ ಇವರುಗಳ ಮೇಲೆ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇದ್ದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು)

ಅ) 1) ಅರಣ್ಯ ಇಲಾಖೆಯ ಈ ಕೆಳಕಂಡ ನಾಲ್ಕು ಅಧಿಕಾರಿಗಳು ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ.

ಕ್ರ. ಸಂ	ಹೆಸರು, ಪದನಾಮ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ಪ್ರಕರಣದ ವಿವರ
01	ಶ್ರೀ ಬಿ.ಆರ್. ಚಿಕ್ಕಮಠ, ವಲಯ ಅರಣ್ಯ ಅಧಿಕಾರಿ, (ಅಮಾನತ್ತು) ಕಲಘಟಗಿ ವಲಯ,	ದಿನಾಂಕ: 26.02.2014 ರಂದು ಲೋಕಾಯುಕ್ತ ಪೊಲೀಸಿನವರು ದಾಳಿ ನಡೆಸಿದ್ದು, ₹ 1,10,82,190.00 ಮೌಲ್ಯದ ಅಕ್ರಮ ಆಸ್ತಿ ಹೊಂದಿರುವುದು ಶೇ 217.29 ಆದಾಯಕ್ಕಿಂತ ಹೆಚ್ಚುವರಿ ಆಸ್ತಿ ಹೊಂದಿರುವುದು.
02	ಶ್ರೀ ಅಶೋಕ್ ಆರ್.ಭಟ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮುಂಡಗೋಡ ವಲಯ, ಉತ್ತರಕನ್ನಡ ಜಿಲ್ಲೆ.	ದಿನಾಂಕ: 11.06.2014 ರಂದು ಲೋಕಾಯುಕ್ತ, ಪೊಲೀಸಿನವರು ದಾಳಿ ನಡೆಸಿದಾಗ ₹ 69,19,387.00 ಮೌಲ್ಯದ ಅಕ್ರಮ ಆಸ್ತಿ ಹೊಂದಿರುವುದು. ಆದಾಯಕ್ಕಿಂತ ಶೇ 116% ಹೆಚ್ಚುವರಿ ಆಸ್ತಿ ಹೊಂದಿರುವುದು.
03	ಶ್ರೀ ಎಂ.ಎಸ್. ರವಿಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ) ಬೆಂಗಳೂರು	ದಿನಾಂಕ: 10–06–2014 ರಂದು ಲೋಕಾಯುಕ್ತ ಪೊಲೀಸಿನವರು ದಾಳಿ ನಡೆಸಿದಾಗ 3,13,69,555/–ರೂ. ಗಳನ್ನು ಮೌಲ್ಯದ ಅಕ್ರಮ ಆಸ್ತಿ ಹೊಂದಿರುವುದು ಆದಾಯಕ್ಕಿಂತ 119.20% ರಷ್ಟು ಹೆಚ್ಚುವರಿ ಆಸ್ತಿ ಹೊಂದಿರುವುದು.

04	ಶ್ರೀ ವೈ.ಎ. ತಳವಾರ್, ವಲಯ ಅರಣ್ಯ ಅಧಿಕಾರಿ, ಗುಜನಾಳ್ ವಲಯ,	ಇವರ ಬಗ್ಗೆ ಲೋಕಾಯುಕ್ತ ಪೊಲೀಸ್ ವಿಭಾಗದಿಂದ ವರದಿ ಸ್ವೀಕೃತವಾಗಬೇಕಾಗಿದೆ.

2) ಲೈಂಗಿಕ ಕಿರುಕುಳಕ್ಕೆ ಸಂಬಂಧಪಟ್ಟಂತೆ ಒಬ್ಬ ಅಧಿಕಾರಿಯ ಮೇಲೆ ದೂರು ದಾಖಲಾಗಿದೆ, ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಹೆಸರು, ಪದನಾಮ ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ಪ್ರಕರಣದ ವಿವರ
01	ಶ್ರೀ ಎಚ್.ಬಿ. ನಾಯಕ್, ಅಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಬಾಗಲಕೋಟೆ, ಪ್ರಸ್ತುತ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಪ್ರಾದೇಶಿಕ ನಿರ್ದೇಶಕರು (ಪರಿಸರ) ಬಳ್ಳಾರಿ.	ಶ್ರೀದೇವಿ ಹುಲ್ಯಾಳ್, ದ್ವಿತೀಯ ದರ್ಜೆ ಸಹಾಯಕಿ, ಉಪ ಸಂರಕ್ಷಣ ಅಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬಾಗಲಕೋಟೆ ಇವರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ. ಈ ಬಗ್ಗೆ ಸದರಿಯವರು ದಿನಾಂಕ: 10-12-2013 ರಂದು ನೀಡಿದ ದೂರಿನ ಮೇರೆಗೆ ಬಾಗಲಕೋಟೆಯ ನವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಮತ್ತು ಪ್ರಥಮ ವರ್ತಮಾನ ವರದಿಯನ್ನು ಬಾಗಲಕೋಟೆ ಅಪರ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಬಾಗಲಕೋಟೆ ಇವರಿಗೆ ಸಲ್ಲಿಸಲಾಗಿದೆ. ಪೊಲೀಸ್‌ರ ತನಿಖೆಯ ಫಲಿತಾಂಶವನ್ನು ನಿರೀಕ್ಷಿಸಲಾಗಿದೆ.

ಆ) ಲೋಕಾಯುಕ್ತ ದಾಳಿಯ ಹಿನ್ನೆಲೆಯಲ್ಲಿ ಶ್ರೀ ಬಿ.ಆರ್. ಚಿಕ್ಕಮಠ, ವಲಯ ಅರಣ್ಯ ಅಧಿಕಾರಿ ಇವರನ್ನು ದಿನಾಂಕ: 06.05.2014 ರ ಆದೇಶದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯಪಡೆ), ಬೆಂಗಳೂರು ಇವರು ಸೇವೆಯಿಂದ ಅಮಾನತ್ತುಗೊಳಿಸಿರುತ್ತಾರೆ. ಲೋಕಾಯುಕ್ತ ದಾಳಿಗೊಳಗಾದ ಶ್ರೀ ಎಂ.ಎಸ್. ರವಿಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರಿಗೆ ಸಂಬಂಧಿಸಿದಂತೆ ಲೋಕಾಯುಕ್ತದ ಅಪರ ಪೊಲೀಸ್ ಮಹಾ ನಿರ್ದೇಶಕರಿಂದ ವರದಿ ಬಂದಿದ್ದು ಅದರ ಆಧಾರದ ಮೇರೆಗೆ ಸದರಿ ಅಧಿಕಾರಿಯನ್ನು ಅಮಾನತ್ತಿನಲ್ಲಿಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಶ್ರೀ ಅಶೋಕ ಆರ್.ಭಟ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಶ್ರೀ ವೈ.ಎ. ತಳವಾರ್, ವಲಯ ಅರಣ್ಯಾಧಿಕಾರಿ ಇವರುಗಳ ವಿಷಯದಲ್ಲಿ ಕ್ರಮ ಕೈಗೊಳ್ಳುವ ಕುರಿತು ಲೋಕಾಯುಕ್ತದಿಂದ ವರದಿ ಬಂದ ಮೇಲೆ ಅದರ ಆಧಾರದ ಮೇರೆಗೆ ಅಮಾನತ್ತಿನಲ್ಲಿಡುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಉಳಿದಂತೆ ಲೈಂಗಿಕ ಕಿರುಕುಳದ ಆರೋಪದ ಮೇಲೆ ಶ್ರೀ ಎಚ್.ಬಿ. ನಾಯಕ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಬಾಗಲಕೋಟೆ ಇವರನ್ನು ಅಲ್ಲಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಪ್ರಾದೇಶಿಕ ನಿರ್ದೇಶಕರು (ಪರಿಸರ), ಬಳ್ಳಾರಿ ಇಲ್ಲಿಗೆ ಸರ್ಕಾರವು ವರ್ಗಾಯಿಸಲಾಗಿದೆ.

ಇ) ಈ ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.